ಶ್ರೀ ಡಿ.ಎಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ಹೌದು

ಆ) ಬೀಳಗಿ ಭಾಗದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

ಇ) 16, ಬೀಳಗಿ ಭಾಗದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ.

ಈ) ಈಗಾಗಲೇ ಎ.ಐ.ಸಿ.ಟಿ.ಇ. ನವದೆಹಲಿ ಯು 5 ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲು 2002–03ನೇ ಸಾಲಿನಲ್ಲಿಯೇ ಮಂಜೂರಾತಿ ನೀಡಿದ್ದು, ಆಯವ್ಯಯದ ಕೊರತೆಯಿಂದಾಗಿ ಅವುಗಳನ್ನು ಪ್ರಾರಂಭಿಸಿರುವುದಿಲ್ಲ, 2007–08ನೇ ಸಾಲಿನಲ್ಲಿ ಈಗಾಗಲೇ ಎ.ಐ.ಸಿ.ಟಿ.ಇ. ಯಿಂದ ಮಂಜೂರಾಗಿರುವ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲು ಆಯವ್ಯಯದ ಅವಕಾಶವನ್ನು ಮಾಡಿಕೊಂಡು ನಂತರ ಹೊಸ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲು ಲಭ್ಯವಿರುವ ಅನುದಾನದಲ್ಲಿ ಅವಕಾಶ ಮಾಡಿಕೊಳ್ಳಲು ಪರಿಶೀಲಿಸಲಾಗುವುದು.

1027 (1282) ಶ್ರೀ ನಿರಾಣಿ ಮುರುಗೇಶ್ ರುದ್ರಪ್ಪ (ಬೀಳಗಿ): ಮಾನ್ಯ ಜಲಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ಬೀಳಗಿ ಮತಕ್ಷೇತ್ರ ವ್ಯಾಪ್ತಿಗೆ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಒಟ್ಟು ಎಷ್ಟು ಟಿ.ಎಂ.ಸಿ. ಪ್ರಮಾಣದಲ್ಲಿ ನೀರು ಲಭ್ಯವಾಗುತ್ತಿದೆ;

ಆ) ಹೆರಕಲ್ಲ ಯೋಜನೆಗೆ ಹೆಚ್ಚುವರಿಯಾಗಿ 9 ಟಿ.ಎಂ.ಸಿ. ಪ್ರಮಾಣದಲ್ಲಿ ನೀರು ಹಂಚಿಕೆಯಾಗಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಈ ಬಗ್ಗೆ ಕೈಕೊಳ್ಳುವ ಕ್ರಮವೇನು;

ಈ) ಹೆರಕಲ್ಲ ಗ್ರಾಮದ ವ್ಯಾಪ್ತಿಗೆ ಬರುವ ಹೊಸ ಬ್ರಿಡ್ಜ್–ಕಂ–ಬ್ಯಾರೇಜ್ ನಿರ್ಮಿಸುವ ಪ್ರಸ್ತಾವನೆ ಈಗ ಯಾವ ಹಂತದಲ್ಲಿದೆ?

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) ಬೀಳಗಿ ಮತಕ್ಷೇತ್ರದ ವ್ಯಾಪ್ತಿಗೆ ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಯಾವುದೇ ನೀರಾವರಿ ಯೋಜನೆ

ಕೈಗೆತ್ತಿಕೊಂಡಿರುವುದಿಲ್ಲ. ಬಚಾವತ್ ತೀರ್ಪಿನಂತೆ ಕೃಷ್ಣಾ ಕಣಿವೆಯಲ್ಲಿ ಲಭ್ಯವಿರುವ 734 ಟಿ.ಎಂ.ಸಿ. ಅಡಿಯಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಮೂಲಕ ಬೀಳಗಿ ತಾಲ್ಲೂಕು ವ್ಯಾಪ್ತಿಗೆ ಸಂಬಂಧಿಸಿದಂತೆ ಮೂರು ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಮೂರು ಏತ ನೀರಾವರಿ ಯೋಜನೆಗಳಿಂದ (1) 0.9 ಟಿ.ಎಂ.ಸಿ. ತೆಗ್ಗಿ– ಸಿದ್ದಾಪೂರ ಮೂಲಕ, (2) 0.23 ಟಿ.ಎಂ.ಸಿ. ಸೊನ್ನ ಮೂಲಕ, (3) 0.51 ಟಿ.ಎಂ.ಸಿ. ರೊಳ್ಳಿ–ಮನ್ನಿಕೇರಿ ಮೂಲಕ ಹೀಗೆ ಒಟ್ಟಾರೆ ಸ್ಕೀಮ್–ಎ ಅಡಿಯಲ್ಲಿ 1.64 ಟಿ.ಎಂ.ಸಿ. ನೀರು ಲಭ್ಯವಾಗುತ್ತದೆ.

ಆ) ಸ್ಕೀಮ್–'ಬಿ' ಅಡಿಯಲ್ಲಿ ಕರ್ನಾಟಕಕ್ಕೆ ಕೃಷ್ಣಾ ಕಣಿವೆಯಲ್ಲಿ ಲಭ್ಯವಾಗಬಹುದಾದ ಹೆಚ್ಚುವರಿ ನೀರಿನಲ್ಲಿ ಹೆರಕಲ್ ಯೋಜನೆಗೆ ತಾತ್ಕಾಲಿಕವಾಗಿ 3.664 ಟಿ.ಎಂ.ಸಿ. ನೀರಿನ ಹಂಚಿಕೆ ಪ್ರಸ್ತಾಪಿಸಲಾಗಿದೆ. ಸ್ಕೀಮ್–'ಬಿ' ಅಡಿ ನೀರಿನ ಹಂಚಿಕೆಗೆ ಸಂಬಂಧಿಸಿದಂತೆ ಕೃಷ್ಣಾ ನ್ಯಾಯಾಧಿಕರಣ ರಚನೆಯಾಗಿದ್ದು, ಅಂತಿಮವಾಗಿ ನ್ಯಾಯಾಧಿಕರಣದ ತೀರ್ಪು ಬಂದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಬಹುದಾಗಿದೆ.

ಈ) ವಿವರವಾದ ಸಮೀಕ್ಷೆ ಕೈಗೊಳ್ಳಲು ಕ್ರಮ ಜರುಗಿಸಲಾಗುತ್ತಿದೆ.

1028 (1283) ಶ್ರೀ ನಿರಾಣಿ ಮುರುಗೇಶ್ ರುದ್ರಪ್ಪ (ಬೀಳಗಿ): ಮಾನ್ಯ ಜಲಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ಬೀಳಗಿ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಒಟ್ಟು ನೀರಾವರಿ ಯೋಜನೆಗಳು ಯಾವುವು;

ಆ) ಈ ಯೋಜನೆಗಳು ಎಷ್ಟು ಹೆಕ್ಟೇರ್ ಪ್ರದೇಶ ನೀರಾವರಿಗೆ ಒಳಪಟ್ಟಿದೆ;

ಇ) ಸರ್ಕಾರದ ಮುಂದಿರುವ ಹೊಸ ಪ್ರಸ್ತಾವನೆಗಳು ಯಾವುವು;

ಈ) ಇವುಗಳಿಂದ ಎಷ್ಟು ಹೆಕ್ಟೇರ್ ಪ್ರದೇಶ ನೀರಾವರಿಗೆ ಒಳಪಡುವುದು;

ಉ) ಇದರಲ್ಲಿ ಬೀಳಗಿ ತಾಲ್ಲೂಕಿನಲ್ಲಿ ನೀರಾವರಿಗೆ ಒಳಪಡದ ಪ್ರದೇಶ ಎಷ್ಟು?